ಬೆಂಗಳೂರು ಜಾಗತಿಕ ನಕ್ಷೆಯಲ್ಲಿ ಮತ್ತೊಮ್ಮೆ ಗಮನ ಸೆಳೆದಿದೆ. ಬ್ರ್ಯಾಂಡ್ ಬೆಂಗಳೂರು ಈಗ ಭಾರತದ ಸ್ಟಾರ್ಟ್‌ಅಪ್ ರಾಜಧಾನಿ ಎಂದು ಚಿರಪರಿಚಿತಗೊಂಡಿದೆ. ಈಗ ಜಗತ್ತಿನ ನವೋದ್ಯಮಗಳ ಸ್ಥಾಪನೆಯಲ್ಲಿ ಹೆಸರಾಗಿರುವ ಇಪ್ಪತ್ತು ಪ್ರಮುಖ ನಗರಗಳಲ್ಲಿ ಬೆಂಗಳೂರು ಸಹ ಒಂದಾಗಿದೆ. ಸ್ಟಾರ್ಟ್‌ಅಪ್‌ಗಳಿಗೆ ಹೆಚ್ಚಿನ ಉತ್ತೇಜನ ನೀಡಲು, ರಾಜ್ಯ ಸರ್ಕಾರವು ನವೆಂಬರ್‌೨೦೧೫ ರಲ್ಲಿ ಸ್ಟಾರ್ಟ್‌ಅಪ್ ಪಾಲಿಸಿಯನ್ನು ಘೋಷಿಸಿದೆ.

ಇದಕ್ಕೆ ಪೂರಕವಾಗಿ ರಾಜ್ಯ ಸರ್ಕಾರವು ಸ್ಟಾರ್ಟ್‌ಅಪ್‌ಗಳಿಗೆ ಕಾರ್ಯ ಸ್ಥಳವನ್ನು ಸಬ್ಸಿಡಿ ದರದಲ್ಲಿ ನೀಡುತ್ತಿದೆ. ಸರ್ಕಾರವು ಈಗಾಗಲೇ ೨ ಸ್ಟಾರ್ಟ್‌ಅಫ್ ವೇರ್‌ಹೌಸ್‌ಗಳನ್ನು ನ್ಯಾಸ್‌ಕಾಮ್ ಹಾಗೂ ಐ.ಎ.ಎಂ.ಎ.ಐ ಸಹಯೋಗದೊಂದಿಗೆ ಸ್ಥಾಪಿಸಿದೆ. ಬೆಂಗಳೂರಿನ ಹಳೇ ವಿಮಾನ ನಿಲ್ದಾಣ ರಸ್ತೆಯ ಡೈಮಂಡ್ ಡಿಸ್ಟ್ರಿಕ್ಟ್ ಎಂಬಲ್ಲಿ ಸುಸಜ್ಜಿತ ಸೌಕರ್ಯಗಳನ್ನು ಒಳಗೊಂಡಂತೆ ೭೫ ಕಾರ್ಯಸ್ಥಳಗಳುಳ್ಳ ಮೊದಲನೇ ಸ್ಟಾರ್ಟ್‌ಅಪ್ ವೇರ್‌ಹೌಸ್‌ನ್ನು ಸರ್ಕಾರ ೨೦೧೩ ರಲ್ಲಿ ಸ್ಥಾಪಿಸಿತ್ತು. ಇದು ದೊಡ್ಡ ಮಟ್ಟದ ಯಶಸ್ಸು ಗಳಿಸಿತ್ತು. ಇದರಿಂದ ಉತ್ತೇಜಿತವಾದ ಸರ್ಕಾರ ಐಳ ನೀತಿಯನ್ವಯ ಬೆಂಗಳೂರಿನಲ್ಲಿ ಬೃಹತ್ ಎರಡನೇ ಸ್ಟಾರ್ಟ್‌ಅಪ್ ವೇರ್‌ಹೌಸ್‌ನ್ನು ಸ್ಥಾಪಿಸುವ ಪ್ರಕ್ರಿಯೆಯನ್ನು ಕಾರ್ಯಾರಂಭ ಗೊಳಿಸಿದೆ.

ಖಾಸಗಿ ಸಾರ್ವಜನಿಕ ಪಾಲುದಾರರ ಮಾದರಿಯಲ್ಲಿ ಮೂರನೇ ಸ್ಟಾರ್ಟ್‌ಅಪ್ ವೇರ್‌ಹೌಸ್ ಸ್ಥಾಪನೆಯಾಗುತ್ತಿದೆ. ಸೂಕ್ತ ವಿಧಾನಗಳನ್ನು ಅನುಸರಿಸಿದ ನಂತರ +೯೧ ಸ್ಪ್ರಿಂಗ್ ಬೋರ್ಡ್ ಸೊಲ್ಯೂಷನ್ಸ್ ಪ್ರೈ.ಲಿ. ಸಂಸ್ಥೆಯನ್ನು ಖಾಸಗಿ ಪಾಲುದಾರರಾಗಿ ಆಯ್ಕೆ ಮಾಡಲಾಗಿದೆ. ನೂತನ ವೇರ್‌ಹೌಸ್ ಸೌಲಭ್ಯವನ್ನು ಹೊಸೂರು ರಸ್ತೆ ಸಮೀಪದ ಫೋರಂ ಮಾಲ್‌ನ ಸಲಾರ್‌ಪುರಿಯಾ ಟವರ್‌ನಲ್ಲಿ ಒಟ್ಟು ೨೩,೦೦೦ ಚದರಡಿಯ ವಿಸ್ತೀರ್ಣದಲ್ಲಿ ಸ್ಥಾಪಿಸಲಾಗಿದ್ದು, ಒಟ್ಟು ೨೭೦ ಕಾರ್ಯಸ್ಥಳಗಳನ್ನು ಹೊಂದಿದೆ. ಇದರಲ್ಲಿ ೧೫೦ ಸೀಟುಗಳನ್ನು ಕೆಬಿಟ್ಸ್‌ಗೆ ಒದಗಿಸಲಿದ್ದು, ಅವುಗಳನ್ನು ಸ್ಟಾರ್ಟ್‌ಅಪ್‌ಗಳಿಗೆ ಸಬ್ಸಿಡಿ ಯೋಜನೆಯಡಿಯಲ್ಲಿ ನೀಡಲಾಗುತ್ತಿದೆ.

ರಿಂದ ೩ ಗಂಟೆಗಳಷ್ಟು ಸಮಯ ಹಿಡಿಯುತ್ತಿತ್ತು. ಮೆಟ್ರೋದಲ್ಲಿ ಸಂಚರಿಸುವ ಮೂಲಕ ಲಕ್ಷಾಂತರ ನಾಗರಿಕರು ಸಮಯ ಉಳಿತಾಯ ಮಾಡಿ, ಟ್ರಾಫಿಕ್‌ನ ಒತ್ತಡದಿಂದ ಪಾರಾಗಿದ್ದಾರೆ.

ಬೈಯಪ್ಪನಹಳ್ಳಿಯಿಂದ ನಾಯಂಡಹಳ್ಳಿ ಜಂಕ್ಷನ್ ವರೆಗಿನ ಈ ಮಾರ್ಗದಲ್ಲಿ ೪.೮ ಕಿ.ಮೀ ಉದ್ದದ ಸುರಂಗ ಮಾರ್ಗವಿರುವುದು ವಿಶೇಷ. ಬೆಂಗಳೂರಿನ ಮೆಜೆಸ್ಟಿಕ್‌ನಲ್ಲಿರುವ ಇಂಟರ್‌ಚೇಂಜ್ ನಿಲ್ದಾಣವು ವಿವಿಧ ಮಾರ್ಗಗಳನ್ನು ಬೆಸೆಯಲಿದೆ.

ಪೀಣ್ಯದಿಂದ ಸಂಪಿಗೆ ರಸ್ತೆವರೆಗಿನ ೧೦ ನಿಲ್ದಾಣಗಳನ್ನು ಒಳಗೊಂಡಿರುವ ೧೦.೩ ಕಿ.ಮೀ. ಉದ್ದದ, ರೀಚ್ ೩ ಹಾಗೂ ೩ಎ ಮಾರ್ಗವನ್ನು ೨೦೧೪ ರಿಂದ ಹಾಗೂ ಪೀಣ್ಯ ವಿಲೇಜ್ ನಿಲ್ದಾಣದಿಂದ ನಾಗಸಂದ್ರವರೆಗಿನ ೩ ನಿಲ್ದಾಣಗಳನ್ನು ಒಳಗೊಂಡಿರುವ ೨.೫ ಕಿ.ಮೀ. ಉದ್ದದ, ರೀಚ್ ೩ಬಿ ಮಾರ್ಗದ ಹಾಗೂ ಮಾಗಡಿ ರಸ್ತೆಯಿಂದ ಮೈಸೂರು ರಸ್ತೆ ಟರ್ಮಿನಲ್‌ವರೆಗಿನ ೬ ನಿಲ್ದಾಣಗಳನ್ನು ಒಳಗೊಂಡಿರುವ ೬.೫ ಕಿಮೀ ಉದ್ದದ, ರೀಚ್ ೨ ಮಾರ್ಗಗಳು ೨೦೧೫ರಲ್ಲಿ ಸಾರ್ವಜನಿಕರ ಓಡಾಟಕ್ಕೆ ಮುಕ್ತವಾಗಿದೆ. ಸ್ವಚ್ಛ, ಸುಂದರ ಮೆಟ್ರೊ ಸಂಚಾರದಿಂದಾಗಿ ಬೆಂಗಳೂರು ಈಗ ಅಂತರರಾಷ್ಟ್ರೀಯ ನಗರಗಳ ಜತೆ ಪೈಪೋಟಿಗೆ ನಿಂತಿದೆ.

# ದಲಿತರು ಬಂದರು ದಾರಿ ಬಿಡಿ..

ಸರ್ವರನ್ನು ಒಳಗೊಂಡ ಸಮಗ್ರ ಅಭಿವೃದ್ಧಿ ಸರ್ಕಾರದ ಆಶಯ. ಎಲ್ಲಾ ಸಮುದಾಯದ ಸರ್ವಾಂಗೀಣ ಏಳಿಗೆಗೆ ಸರ್ಕಾರ ಶ್ರಮ ವಹಿಸುತ್ತಿದೆ. ಆದಾಗ್ಯೂ, ತುಳಿತಕ್ಕೆ ಒಳಗಾದವರು ಹಾಗೂ ನೊಂದವರ ನೆರವಿಗೆ ನಿಲ್ಲುವುದು ಸರ್ಕಾರದ ಆದ್ಯತೆಯಾಗಿದೆ. ಶತಮಾನಗಳಿಂದ ಅವಕಾಶ ವಂಚಿತರಾಗಿರುವ ಪರಿಶಿಷ್ಟ ಜಾತಿ ಮತ್ತು ಪಂಗಡದ ಅಭ್ಯುದಯ ಸರ್ಕಾರದ ಪರಮ ಧ್ಯೇಯವಾಗಿದೆ.

ಸಮಾನತೆ ನಮ್ಮ ಸಂವಿಧಾನದ ಮೂಲ ಆಶಯ. ಇದನ್ನು ಸಾಧಿಸಲು ಸರ್ಕಾರ ರಾಜ್ಯದ ಪರಿಶಿಷ್ಟ ಜಾತಿ ಮತ್ತು ಪಂಗಡಗಳ ಜನರಿಗೆ ಉತ್ತಮ ಶಿಕ್ಷಣ, ಆರ್ಥಿಕ ಸ್ಥಿತಿ ಸುಧಾರಣೆಗೆ ಬೆಂಬಲದಂತಹ ಕಾರ್ಯಕ್ರಮಗಳನ್ನು ರೂಪಿಸಿದೆ. ಹಾಗೆಯೇ, ಹನ್ನೆರಡನೆ ಶತಮಾನದ ಶರಣರ ಸಮಾನತೆಯ ಆಶಯವನ್ನು ಈಡೇರಿಸಲು ಸರ್ಕಾರವು ಬದ್ಧವಾಗಿದೆ. ಈ ನಿಟ್ಟಿನಲ್ಲಿ ನೊಂದವರ ನೋವನ್ನು ಉಪಶಮನಗೊಳಿಸಲು ಸರ್ಕಾರ ಹಲವಾರು ಕಾರ್ಯಕ್ರಮಗಳನ್ನು ಜಾರಿಗೆ ತಂದಿದೆ.

ರಾಜ್ಯದ ಯೋಜನಾ ವೆಚ್ಚವು ಪರಿಶಿಷ್ಟ ಜಾತಿ / ಪಂಗಡಗಳ ಜನಸಂಖ್ಯೆಗೆ ಅನುಗುಣವಾಗಿ ಹಂಚಿಕೆಯಾಗಬೇಕು ಎನ್ನುವುದು ಸರ್ಕಾರದ ಆಶಯ. ಕರ್ನಾಟಕದಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಜನಸಂಖ್ಯೆ ರಾಜ್ಯದ ಒಟ್ಟು ಜನಸಂಖ್ಯೆಯ ಪೈಕಿ ಶೇ. ೨೪.೧ರಷ್ಟಿದೆ. ಇದಕ್ಕೆ ಅನುಗುಣವಾಗಿ ರಾಜ್ಯದಲ್ಲಿ ಪರಿಶಿಷ್ಟ ಜಾತಿ ಉಪಯೋಜನೆ ಮತ್ತು ಪರಿಶಿಷ್ಟ ಪಂಗಡದ ಉಪಯೋಜನೆ ಕಾಯಿದೆ ೨೦೧೩ರಿಂದ ಜಾರಿಯಾಗಿದೆ. ಶೇ. ೨೪.೧ರಷ್ಟು ಅನುದಾನವನ್ನು ಈ ಸಮುದಾಯಗಳ ಅಭಿವೃದ್ಧಿಗಾಗಿ ಮೀಸಲಿಡುವುದು ಈಗ ಕಡ್ಡಾಯವಾಗಿದೆ. ಅವಕಾಶ ವಂಚಿತ ಸಮುದಾಯಗಳಿಗೆ ಸಂಪತ್ತು ಮತ್ತು ಅವಕಾಶಗಳಲ್ಲಿ ಸಮಪಾಲು ನೀಡುವ ಈ ಯೋಜನೆಯನ್ನು ಇಡೀ ದೇಶದಲ್ಲಿ ಜಾರಿಗೆ ತಂದ ಎರಡನೇ ರಾಜ್ಯ ಎನ್ನುವ ಖ್ಯಾತಿ ಕರ್ನಾಟಕಕ್ಕಿದೆ.

ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಆರ್ಥಿಕ ಅಭ್ಯುದಯಕ್ಕೆ ಒತ್ತು ನೀಡಿರುವ ಸರ್ಕಾರ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕ ಅಧಿನಿಯಮ ೧೯೯೯ ಕ್ಕೆ ತಿದ್ದುಪಡಿ ವಿಧೇಯಕ ೨೦೧೬ರಲ್ಲಿ ಮೀಸಲಾತಿಯನ್ನು ಘೋಷಿಸಿದೆ. ಇದರಡಿ ಪರಿಶಿಷ್ಟ ಜಾತಿ ಮತ್ತು ಪಂಗಡದ ನಿರುದ್ಯೋಗಿಗಳಿಗೆ ೫೦ ಲಕ್ಷ ರೂ.ಗಳ ವರೆಗಿನ ಕಾಮಗಾರಿಗಳಲ್ಲಿ ಮೀಸಲಾತಿಯನ್ನು ಸರ್ಕಾರ ಪ್ರಕಟಿಸಿದೆ. ಜೊತೆಗೆ, ೫೦ ಲಕ್ಷವರೆಗಿನ ಕಾಮಗಾರಿಯ ಟೆಂಡರ್‌ನಲ್ಲಿ ಭಾಗವಹಿಸುವ ಪರಿಶಿಷ್ಟ ಜಾತಿಯ ಶೇ. ೧೭.೧೫ ಹಾಗೂ ಪರಿಶಿಷ್ಟ ಪಂಗಡದ ಶೇ. ೬.೯೫ ರಷ್ಟು ಗುತ್ತಿಗೆದಾರರಿಗೆ ಕಾಮಗಾರಿಯಲ್ಲಿ ಮೀಸಲಾತಿ ಕಲ್ಪಿಸಲಾಗುತ್ತಿದೆ.

ಈ ಕಾಯ್ದೆಯಿಂದಾಗಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಕಲ್ಯಾಣ ಕಾರ್ಯಕ್ರಮಗಳಿಗಾಗಿ ಖರ್ಚು ಮಾಡುವ ಹಣ ದುಪ್ಪಟ್ಟಾಗಿದೆ. ೨೦೧೩–೧೪ರ ಬಜೆಟ್‌ನಲ್ಲಿ ೮೬೧೬ ಕೋಟಿ ರೂ. ನಿಗದಿಯಾಗಿದ್ದರೆ ೨೦೧೪–೧೫ನೇ ಸಾಲಿನಲ್ಲಿ ಇದು ೧೫,೮೩೪ ಕೋಟಿ ರೂ.ಗಳಾಗಿತ್ತು. ೨೦೧೫–೧೬ನೇ ಸಾಲಿಗಾಗಿ ೧೬,೩೫೬ ಕೋಟಿ ರೂ.ಗಳನ್ನು ಬಜೆಟ್‌ನಲ್ಲಿ ನಿಗದಿ ಮಾಡಿದೆ.

ಒಟ್ಟಾರೆಯಾಗಿ ಕಳೆದ ಮೂರು ವರ್ಷಗಳಲ್ಲಿ ಎಸ್.ಸಿ.ಎಸ್.ಪಿ. ಮತ್ತು ಟಿ.ಎಸ್.ಪಿ. ಉಪ ಯೋಜನೆಗಳಡಿ ಎಲ್ಲಾ ಅಭಿವೃದ್ಧಿ ಇಲಾಖೆಗಳಿಗೆ ೪೦,೮೦೦ ಕೋಟಿ ರೂಪಾಯಿಗಳನ್ನು ಸರ್ಕಾರ ಒದಗಿಸಿದೆ. ಈ ಪೈಕಿ ೨೦೧೬ರ ಮಾರ್ಚ್ ಅಂತ್ಯಕ್ಕೆ ಒಟ್ಟು ೩೬,೫೯೩ ಕೋಟಿ ರೂಪಾಯಿ ವೆಚ್ಚವಾಗಿದೆ. ೨೦೧೬–೧೭ರ ಅಂತ್ಯದ ವೇಳೆಗೆ ಸರ್ಕಾರ ಒಟ್ಟಾರೆಯಾಗಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಕಲ್ಯಾಣಕ್ಕಾಗಿ ೬೦ ಸಾವಿರ ಕೋಟಿ ರೂಪಾಯಿಗಳನ್ನು ವೆಚ್ಚ ಮಾಡಲಿದೆ.